# ಕರ್ನಾಟಕ ಸರ್ಕಾರ

ಗ್ರಾಅಪ 485 ಗ್ರಾನೀಸ (1) 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 26.11.2014.

**ಇವರಿಂದ,**
ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ತುರ್ತು

**ಇವರಿಗೆ,**
1.ಜಿಲ್ಲಾಧಿಕಾರಿಗಳು,
ಬಾಗಲಕೋಟೆ / ಬಿಜಾಪುರ,

2.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್,
ಬಾಗಲಕೋಟೆ / ಬಿಜಾಪುರ,

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಅಸುರಕ್ಷಿತ ತೆರೆದ ಕೊಳವೆ ಬಾವಿಯಲ್ಲಿ ಬಿದ್ದು ಸಾವನ್ನಪ್ಪಿರುವ ಪ್ರಕರಣಗಳಲ್ಲಿ ಚಾರ್ಜ್ ಶೀಟ್ ಅನ್ನು ಸಲ್ಲಿಸಿರುವ ಕುರಿತು.

ಉಲ್ಲೇಖ: 1) ರಿಟ್ ಪೆಟಿಷನ್ ನಂ: 38276/2014

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯವು ದಿನಾಂಕ: **13.11.2014** ರಂದು ಸದರಿ ರಿಟ್ ಪೆಟಿಷನ್‌ನ ವಿಚಾರಣೆಯ ವೇಳೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

1. ಸದರಿ ರಿಟ್ ಪೆಟಿಷನ್‌ಗೆ ಸಂಬಂಧಿಸಿದಂತೆ FIR ಮೇಲಿನ ಚಾರ್ಜ್ ಶೀಟ್ ಮೂಲ ಪ್ರತಿಯನ್ನು ಹಾಗೂ ಅದರ ಇಂಗ್ಲೀಷ್ ಅನುವಾದದ ಪ್ರತಿಯನ್ನು ಸಲ್ಲಿಸುವಂತೆ ಆದೇಶಿಸಿರುತ್ತಾರೆ. ಆದುದರಿಂದ ತಾವು ಚಾರ್ಜ್ ಶೀಟ್ ಮೂಲ ಪ್ರತಿಯನ್ನು ಹಾಗೂ ಅದರ ಇಂಗ್ಲೀಷ್ ಅನುವಾದದ ಪ್ರತಿಯನ್ನು, ಧೃಢೀಕರಿಸಿ ನೇರವಾಗಿ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ಅಡ್ವೋಕೇಟ್ ಜನರಲ್ ಕಛೇರಿಯ ಹಿರಿಯ ಸರ್ಕಾರಿ ವಕೀಲರಾದ ಶ್ರೀ ದೇವದಾಸ್ ರವರಿಗೆ ಸಲ್ಲಿಸುವುದು.

2. ರಾಜ್ಯದಲ್ಲಿರುವ ಎಲ್ಲಾ ಬೋರ್‌ವೆಲ್ ಏಜನ್ಸಿಗಳ ವಿಳಾಸ ಹಾಗೂ ದೂರವಾಣಿ ಇತ್ಯಾದಿಗಳ ವಿವರಗಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಮನ್ವಯದಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಧೃಢೀಕರಿಸಿ ಸರ್ಕಾರಕ್ಕೆ ಕಳುಹಿಸಬೇಕು ಹಾಗೂ ಪ್ರತಿಯನ್ನು ನೇರವಾಗಿ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ಅಡ್ವೋಕೇಟ್ ಜನರಲ್ ಕಛೇರಿಯ ಹಿರಿಯ ಸರ್ಕಾರಿ ವಕೀಲರಾದ ಶ್ರೀ ದೇವದಾಸ್ ರವರಿಗೆ ಸಲ್ಲಿಸಲು ಕೋರಿದೆ.

3. ಜಿಲ್ಲಾ ವೆಬ್‌ಸೈಟ್‌ನಲ್ಲಿ ಈಗಾಗಲೇ ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ/142/ಗ್ರಾನೀಸ(1)2014, ದಿನಾಂಕ:17/10/2014 ರಲ್ಲಿ ಹೇಳಿರುವಂತೆ ಕೊಳವೆ ಬಾವಿ ಕೊರೆಯುವುದಕ್ಕಾಗಿ ಪರವಾನಗಿ ಕೊಡಲು

ಸೂಚಿತ / ನಿರ್ದಿಷ್ಟಪಡಿಸಿರುವ ಅಧಿಕಾರಿಯು ಇದುವರೆವಿಗೆ ವಿಷಯಕ್ಕೆ ಸಂಬಂಧಿಸಿದಂತೆ ಪರವಾನಗಿ ನೀಡಿರುವ ಒಟ್ಟು ಸಂಖ್ಯೆ, ವಿಫಲ ಹಾಗೂ ಸಫಲ, ಅಸುರಕ್ಷಿತ ಕೊಳವೆ ಬಾವಿಗಳನ್ನು ಮುಚ್ಚಿರುವ ಸಂಖ್ಯೆ, ಚಾಲ್ತಿಯಲ್ಲಿರುವ ಕೊಳವೆ ಬಾವಿಗಳ ಸಂಖ್ಯೆ ಇತ್ಯಾದಿ ವಿವರಗಳನ್ನು, ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರೋಢೀಕರಿಸಿ ಅಂತರ್ಜಲ ಪ್ರಾಧಿಕಾರದ ಸಮನ್ವಯದಲ್ಲಿ, ಧೃಢೀಕರಿಸಿ ಸರ್ಕಾರಕ್ಕೆ ಕ್ರೋಢೀಕೃತ ವರದಿ ನೀಡಿ ಪ್ರತಿಯನ್ನು ನೇರವಾಗಿ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ಅಡ್ವೋಕೇಟ್ ಜನರಲ್ ಕಛೇರಿಯ ಹಿರಿಯ ಸರ್ಕಾರಿ ವಕೀಲರಾದ ಶ್ರೀ ದೇವದಾಸ್ ರವರಿಗೆ ಸಲ್ಲಿಸಲು ಕೋರಿದೆ.

ತೆಗೆದುಕೊಂಡ ಕ್ರಮ ಬಗ್ಗೆ ವರದಿಯನ್ನು ದಿನಾಂಕ:**07.12.2014** ರೊಳಗೆ ಸರ್ಕಾರಕ್ಕೆ ಸಲ್ಲಿಸಲು ಕೋರಿದೆ.

ತಮ್ಮ ವಿಶ್ವಾಸಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಇ-ಮೇಲ್:rk3452000@gmail.com
ಫೋನ್:22032806, ಫ್ಯಾಕ್ಸ್:22203175

ಪ್ರತಿಯನ್ನು:

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಇವರಿಗೆ ಮುಂದಿನ ಕ್ರಮಕ್ಕಾಗಿ ಕೋರಿ ಕಳುಹಿಸಲಾಗಿದೆ.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿಗಳಿಗೆ, ಇವರಿಗೆ ಮುಂದಿನ ಕ್ರಮಕ್ಕಾಗಿ ಕೋರಿ ಕಳುಹಿಸಲಾಗಿದೆ.
3. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ಬೆಂಗಳೂರು. ಇವರಿಗೆ ಮುಂದಿನ ಕ್ರಮಕ್ಕಾಗಿ ಕೋರಿ ಕಳುಹಿಸಲಾಗಿದೆ.
4. ನಿರ್ದೇಶಕರು, ಅಂತರ್ಜಲ ಪ್ರಾಧಿಕಾರ, ಖನಿಜ ಭವನ; ಬೆಂಗಳೂರು. ಇವರಿಗೆ ಮುಂದಿನ ಕ್ರಮಕ್ಕಾಗಿ ಕೋರಿ ಕಳುಹಿಸಲಾಗಿದೆ.
5. ಕರ್ನಾಟಕ ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯದ ಅಡ್ವೋಕೇಟ್ ಜನರಲ್ ಕಛೇರಿಯ ಹಿರಿಯ ಸರ್ಕಾರಿ ವಕೀಲರಾದ ಶ್ರೀ ದೇವದಾಸ್ ಬೆಂಗಳೂರು, ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.